ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
Karnataka Neeravari Nigam Limited
(A Government of Karnataka Enterprise)

ಕನೀನಿ/ಆರ್ಥಿಕ/e-Guarantee/2024-25 0599 ದಿ: 18.05.2024

ಸುತ್ತೋಲೆ

ವಿಷಯ: ಭದ್ರತಾ ಠೇವಣಿಗೆ ಇ-ಬ್ಯಾಂಕ್ ಗ್ಯಾರಂಟಿ ಪಡೆಯುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂ: ಜಸಂಇ 65 ಎಂಬಿಐ 2023 ದಿ: 06.06.2023.
2. ಸರ್ಕಾರದ ಸುತ್ತೋಲೆ ಸಂ: ಆಇ 5 ವೆಚ್ಚ-12/2023 ದಿ: 10.02.2023
3. ಸರ್ಕಾರದ ಸುತ್ತೋಲೆ ಸಂ: ಆಇ 5 ವೆಚ್ಚ-12/2023 ದಿ: 15.05.2023

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಪತ್ರ ಹಾಗೂ ಸುತ್ತೋಲೆಗಳಲ್ಲಿ ಟೆಂಡರ್ ಪ್ರಕ್ರಿಯೆಗಳಲ್ಲಿ ಭದ್ರತಾ ಠೇವಣಿಯನ್ನು "e-Bank Guarantee" ಮೂಲಕ ಪಡೆಯಲು ಹಾಗೂ ಈ ಬಗ್ಗೆ ಮಾದರಿ ಟೆಂಡರ್ ದಾಖಲೆಗಳಲ್ಲಿ ಅಗತ್ಯ ಮಾರ್ಪಾಡು ಮಾಡಿಕೊಂಡು ಟೆಂಡರ್ ಆಹ್ವಾನಿಸಲು ಕ್ರಮವಹಿಸುವಂತೆ ನಿರ್ದೇಶಿಸಲಾಗಿರುತ್ತದೆ. ಆದರೆ, ನಿಗಮದಲ್ಲಿ ಇದನ್ನು ಪಾಲಿಸದೇ ಇರುವುದು ಕೆಲವೊಂದು ಪ್ರಕರಣಗಳಲ್ಲಿ ಕಂಡುಬಂದಿರುತ್ತದೆ. ಈ ಹಿನ್ನಲೆಯಲ್ಲಿ ಕೆಳಕಂಡಂತೆ ಕ್ರಮ ಜರುಗಿಸಲು ಸೂಚಿಸಿದೆ;

(i) ಸರ್ಕಾರದ ಸುತ್ತೋಲೆಯನ್ವಯ ದಿ:10.02.2023 ರಿಂದ ಅನ್ವಯವಾಗುವಂತೆ ಟೆಂಡರ್ ಪ್ರಕ್ರಿಯೆಗಳಲ್ಲಿ ಭದ್ರತಾ ಠೇವಣಿಯನ್ನು "e-Bank Guarantee" ಮೂಲಕ ಪಡೆಯಲು ಹಾಗೂ ಪರಿಶೀಲಿಸಲು NeSL (National E.-Governance Services Limited) ಅಡಿ Registration ಮಾಡಿಕೊಂಡು ತಮ್ಮ ಹಂತದಲ್ಲಿ e-BG ಗಳನ್ನು ಪರಿಶೀಲನೆ ಮಾಡಲು ಕ್ರಮ ಕೈಗೊಳ್ಳುವುದು;

(ii) ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ಬ್ಯಾಂಕ್ ಗ್ಯಾರಂಟಿಗಳ ನೈಜತೆಯನ್ನು ಭೌತಿಕವಾಗಿ ದೃಢೀಕರಿಸುವುದು ಹಾಗೂ ನವೀಕರಣ ಸಂದರ್ಭದಲ್ಲಿ ದೃಢೀಕರಣವನ್ನು SFMS (Structured Financial Messaging System) "760-COV" ನಮೂನೆ ಮೂಲಕವೇ ಪಡೆಯಲು ಅಗತ್ಯ ಕ್ರಮ ವಹಿಸುವುದು;

(iii) ಮುಖ್ಯ ಲೆಕ್ಕಾಧಿಕಾರಿಗಳು ಕಾಮಗಾರಿ ಬಿಲ್ಲುಗಳ ಪಾವತಿ ಮುನ್ನ ಎಲ್ಲಾ ಬ್ಯಾಂಕ್ ಗ್ಯಾರಂಟಿಗಳ ನೈಜತೆಯನ್ನು ಹಾಗೂ ದೃಢೀಕರಣವನ್ನು SFMS (Structured Financial Messaging System) ಮೂಲಕ ಪಡೆದಿರುವ ಬಗ್ಗೆ ಕಡ್ಡಾಯವಾಗಿ ಪರಿಶೀಲಿಸಿ, ಬಿಲ್ಲುಗಳನ್ನು ಪಾವತಿಸುವುದು;

"Bank Guarantee" ನಿರ್ವಹಣೆಯು ಒಂದು ಆರ್ಥಿಕ ಔಚಿತ್ಯವಾಗಿದ್ದು, ಇದನ್ನು ಪಾಲಿಸದೇ ಇದ್ದಲ್ಲಿ ಇದು ಸರ್ಕಾರದ ನಿರ್ದೇಶನದ ಸ್ಪಷ್ಟ ಉಲ್ಲಂಘನೆಯಾಗಿದ್ದು, ಈ ಕುರಿತು ಆಗುವ ಆರ್ಥಿಕ ನಷ್ಟಕ್ಕೆ ಸಂಬಂಧಪಟ್ಟ ವಿಭಾಗದ ಕಾರ್ಯಪಾಲಕ ಇಂಜಿನೀಯರ್‌ರವರೇ ನೇರ ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಈ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಸೂಚಿಸಿದೆ.

ವಂದನೆಗಳೊಂದಿಗೆ,

28 MAY 2024

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ;
1. ಎಲ್ಲಾ ಮುಖ್ಯ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ ನಿಯಮಿತ
2. ಎಲ್ಲಾ ಅಧೀಕ್ಷಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ ನಿಯಮಿತ
3. ಮುಖ್ಯ ಲೆಕ್ಕಾಧಿಕಾರಿಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕೇಂದ್ರ ಕಚೇರಿ, ಧಾರವಾಡ
4. ಮುಖ್ಯ ಆಡಳಿತಾಧಿಕಾರಿಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕೇಂದ್ರ ಕಚೇರಿ, ಧಾರವಾಡ.
5. ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತ.



AnyScanner

**ಕರ್ನಾಟಕ ಸರ್ಕಾರ**

ಸಂಖ್ಯೆ: ಜಸಂಇ 65 ಎಂಬಿಐ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 06.06.2023

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ,
ವಿಕಾಸ ಸೌಧ.

ಇವರಿಗೆ,

1. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
5. ನಿರ್ದೇಶಕರು, ಕಾಡಾ ನಿರ್ದೇಶನಾಲಯ, ಬೆಂಗಳೂರು.
6. ಮುಖ್ಯ ಇಂಜನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
7. ನಿಬಂಧಕರು/ಮುಖ್ಯ ಇಂಜಿನಿಯರ್, AC-IWRM, ಬೆಂಗಳೂರು.
8. ಮುಖ್ಯ ಇಂಜಿನಿಯರ್, ಅಣೆಕಟ್ಟು ಸುರಕ್ಷತಾ ಸಂಸ್ಥೆ, ಬೆಂಗಳೂರು.
9. ನಿರ್ದೇಶಕರು, ಕೆ.ಇ.ಆರ್.ಎಸ್, ಕೃಷ್ಣಾರಾಜಸಾಗರ.
10. ನಿರ್ದೇಶಕರು, ವಾಲ್ಮಿ, ಧಾರವಾಡ.

ಮಾನ್ಯರೇ,

ವಿಷಯ:- ಭದ್ರತಾ ಠೇವಣಿಗೆ ಇ-ಬ್ಯಾಂಕ್ ಗ್ಯಾರಂಟಿ ಪಡೆಯುವ ಕುರಿತು.

ಉಲ್ಲೇಖ:- ಸರ್ಕಾರದ ಜಂಟಿ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಜಿ.ಪಂ) ಇವರ ಸುತ್ತೋಲೆ ಸಂಖ್ಯೆ: ಆಇ 5 ವೆಚ್ಚ-12/2023 ದಿನಾಂಕ:15.05.2023

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರ್ಥಿಕ ಇಲಾಖೆಯಿಂದ ಸ್ವೀಕೃತವಾಗಿರುವ ಉಲ್ಲೇಖಿತ ಸುತ್ತೋಲೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸದರಿ ಸುತ್ತೋಲೆಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ವಯ ಕ್ರಮವಹಿಸುವಂತೆ ತಮಗೆ ತಿಳಿಸಲು ನಿರ್ದೇಶಿತಳಾಗಿದೇನೆ.

ತಮ್ಮ ವಿಶ್ವಾಸಿ,

06/06/2023

(ಶೈಲಜಾ ಕಲ್ಲೂರು)
ತಾಂತ್ರಿಕ ಸಹಾಯಕರು (ತಾಂತ್ರಿಕ-6)
ಜಲ ಸಂಪನ್ಮೂಲ ಇಲಾಖೆ.

ಅಡಕ: ಮೇಲಿನಂತೆ

AnyScanner

**ಕರ್ನಾಟಕ ಸರ್ಕಾರ**

ಸಂಖ್ಯೆ:ಆಇ 5 ವೆಚ್ಚ-12/2023

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:10.02.2023

**ಸುತ್ತೋಲೆ**

ವಿಷಯ : ಭದ್ರತಾ ಠೇವಣಿಗೆ ಇ-ಬ್ಯಾಂಕ್ ಗ್ಯಾರಂಟಿ ಪಡೆಯುವ ಕುರಿತು.

*****

ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕ್ರಿಯೆಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 12 (1) ರಲ್ಲಿ ಮುಂಗಡ ಹಣ ಠೇವಣಿಯನ್ನು (Earnest Money Deposit) ರದ್ದುಪಡಿಸಲಾಗದ ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.

ಮೇಲ್ಕಂಡ ನಿಯಮದ ಬ್ಯಾಂಕ್ ಗ್ಯಾರಂಟಿ ಎಂಬುದರ ವ್ಯಾಪ್ತಿಯಲ್ಲಿ "e-Bank Guarantee" ಸಹ ಒಳಗೊಂಡಿರುತ್ತದೆ ಎಂಬುದಾಗಿ ಸ್ಪಷ್ಟೀಕರಿಸಿದೆ. ಈ ಹಿನ್ನಲೆಯಲ್ಲಿ ಭವಿಷ್ಯಾವರ್ಥಿಯಲ್ಲಿನ ಟೆಂಡರ್ ಪ್ರಕ್ರಿಯೆಗಳಲ್ಲಿ ಮುಂಗಡ ಹಣ ಠೇವಣಿಯನ್ನು "e-Bank Guarantee" ಮೂಲಕವೂ ಪಡೆಯಲು ಕ್ರಮವಹಿಸಬಹುದಾಗಿರುತ್ತದೆ. ಅದರಂತೆ, ಮಾದರಿ ಟೆಂಡರ್ ದಾಖಲೆಗಳಲ್ಲಿ ಅಗತ್ಯ ಮಾರ್ಪಾಡು ಮಾಡಿಕೊಂಡು ಟೆಂಡರ್ ಆಹ್ವಾನಿಸಲು ಕ್ರಮವಹಿಸುವಂತೆ ತಿಳಿಸಿದೆ.

(ಶ್ರೀಕೃಷ್ಣ ಎನ್.ಬುಗಟ್ಯಾಗೋಳ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಜಿ.ಪಂ.)

ಇವರಿಗೆ:

ಸರ್ಕಾರದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು.

AnyScanner

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 5 ವೆಚ್ಚ-12/2023

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:15.05.2023

**ಸುತ್ತೋಲೆ**

ವಿಷಯ : ಭದ್ರತಾ ಠೇವಣಿಗೆ ಇ-ಬ್ಯಾಂಕ್ ಗ್ಯಾರಂಟಿ ಪಡೆಯುವ ಕುರಿತು.

*****

ಸುತ್ತೋಲೆ ಸಂ:ಆಇ 5 ವೆಚ್ಚ 12/2023, ದಿನಾಂಕ:10.02.2023 ರಲ್ಲಿ ಭವಿಷ್ಯಾವರ್ಥಿಯಲ್ಲಿನ ಟೆಂಡರ್ ಪ್ರಕ್ರಿಯೆಗಳಲ್ಲಿ ಮುಂಗಡ ಹಣ ಠೇವಣಿಯನ್ನು "e-Bank Guarantee" ಮೂಲಕವೂ ಪಡೆಯಲು ನಿರ್ದೇಶಿಸಲಾಗಿದೆ.

ಅದರಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 12(3) ರಲ್ಲಿ ನಿಗಧಿಪಡಿಸಿರುವ ಭದ್ರತಾ ಠೇವಣಿ (security deposit) ಯನ್ನು ಸಹ "e-Bank Guarantee" ಮೂಲಕ ಪಡೆಯಲು ಕ್ರಮವಹಿಸಬಹುದಾಗಿರುತ್ತದೆ. ಈ ಬಗ್ಗೆ ಮಾದರಿ ಟೆಂಡರ್ ದಾಖಲೆಗಳಲ್ಲಿ ಅಗತ್ಯ ಮಾರ್ಪಾಡು ಮಾಡಿಕೊಂಡು ಟೆಂಡರ್ ಆಹ್ವಾನಿಸಲು ಕ್ರಮವಹಿಸತಕ್ಕದ್ದು.

(ಶ್ರೀಕೃಷ್ಣ ಎನ್.ಬುಗ್ಟ್ಯಾಗೋಳ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಜಿ.ಪಂ.)

**ಇವರಿಗೆ:**
ಸರ್ಕಾರದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು.

ಸಂ. 1911 ದಿ: 20/5/2023
ಉ.ಕಾ..(ಗ್ರಾ.ಭಾ.ಜ.ನಿ) ಜನಸಂಪರ್ಕ